ಬಣ್ಣದ ಬಿಂದಿ ಹಣೆಗಿಟ್ಟು ಕಿಟಕಿಯಿಂದ ಹೊರ ಇಣುಕಿದಳು. 'ಬಿಂದಿ ಎಲ್ಲಾ ಬೆಳಕಿನಲ್ಲಿ ಕಿರುದೊಂದಿಯಂತೆ ಆಯ್ತು. ಮಲ್ಲೆಗಡಲು ಗೆಜ್ಜೆ ಕಟ್ಟಿ ನಿನ್ನ ನೋಡಿ ಹೋಯ್ತು.' ಸಂದೇಶ ತನಗಾಗಿಯೇ ಹಾಡಿದ್ದ ಹಾಡಿನ ಸಾಲೊಂದು ಅವಳ ಕಣ್ಣೀರ ಗಾಢವಾದ ಬಿಸಿಪಸೆಯಲ್ಲಿ, ಕಣ್ಣ ಮುಂದೆ ಬೆಳಕಿದ್ದರೂ ಕತ್ತಲೆಗೆ ಕೊಂಪೆಗೆ ಹೋಗಿಯೇ ಬೀಳುತ್ತೇನೆ ಅನ್ನೋ ಅವಳ ದಿಟ್ಟದ್ದೋ, ಕೆಟ್ಟದ್ದೋ ನಿರ್ಧಾರದಲ್ಲಿ ತೇಲಿಕೊಂಡು, ಭೋರ್ಗರೆದುಕೊಂಡು ಸಾಗರವಾಯ್ತು. ಸಂದೇಶನ ಬೆಳ್ಳೊಗವೂ ಅವಳನ್ನು ಆ ಕ್ಷಣಕ್ಕೆ ಕಾಡಿಬಿಟ್ಟಿತು.

ಕಿಟಕಿಯ ಕನ್ನಡಿಯ ಪ್ರತಿಬಿಂಬದ ತುಂಬೆಲ್ಲಾ ಹಗುರಾಗಿ ಸರಿಯುತ್ತಿದ್ದ ಬಸ್ಸಿನ ಕುಲುಕಾಟದ ತುಂಬೆಲ್ಲಾ ಸಂದೇಶನ ದಿವ್ಯ ಪ್ರತಿಮೆಯೇ ಹರಡಿದಂತಾಗಿ ಏನೋ ಆಗಿಹೋದಳು ಪಲ್ಲವಿ.

ಕೊನೆಗೂ ನಾನು ಅವನನ್ನು ಕೂಡಲು ಆಗಲೇ ಇಲ್ಲ. ಅಷ್ಟೊಂದು ಬೆಳಕೇ ಕೊಡುತ್ತಿದ್ದವನಿಗೆ ಕೊನೆಗೂ ಕತ್ತಲೆಯೇ ಕೊಟ್ಟೆನಾ? ನನ್ನೊಳಗು ನಿನ್ನೊಳಗು ನಿತ್ಯ ಬೆಳಗುತ್ತಾವೆ, ನಮ್ಮೊಳಗನ್ನು ನಾವು ಉಳಿಸಿಕೊಳ್ಳೋಣ ಎಂದು ದೊಡ್ಡ ಮಹಾತ್ಮೆಯಂತೆ ಸಾರುತ್ತಾ, ಅವನ ಭಾವ ಪ್ರಪಂಚದಲ್ಲಿ ಆಟವಾಡಿದೆಯಲ್ಲ, ಛೇ ಅಂತ ತನ್ನೊಳಗಲ್ಲಿ ಯಾವುದೋ ಪ್ರೇತಾತ್ಮವೊಂದು ಕಿಟಾರನೆ ಕಪಾಳಕ್ಕೆ ಬಾರಿಸಿದಂತೆನಿಸಿ ಪಲ್ಲವಿ ಚೀರಿದಳು. ಮುಸ್ಸಂಜೆಯ ಕಪ್ಪು ಆವರಿಸುತ್ತಾ ಆನೆಕೆರೆಯ ಹೊನ್ನೀರಲ್ಲಿ ಬೀದಿದೀಪದ ಪಿಳಿಪಿಳಿ ಕಣ್ಣಿನ ಬಣ್ಣಗಳು ಅದ್ದಿಕೊಳ್ಳುತ್ತಾ, ದೂರದಲ್ಲಿ ಬಿಮ್ಮಗೆ ನಿಂತಿರುವ ಶಾಂತಮೂರ್ತಿ ಬಾಹುಬಲಿಯ ಮೊಗವೂ ಕೂಡ ಪುಟ್ಟ ಕಾಡುಗಳ ಮಧ್ಯೆ ಒಮ್ಮೆ ಜಿಗ್ಗೆಂದು ಚಿಮ್ಮಿಹೋದಾಗ ಪಲ್ಲವಿಯ ಕಣ್ಣೂ ನೀರಾಡಿತು.

ಬಸ್ಸು ಹಾವಿನಂತೆ ಸರಿಯುವಾಗ ಅವಳ ಅದೇ ಕಣ್ಣ ಹಣತೆಯ ಬೆಳಕಲ್ಲಿ, ಆನೆಕೆರೆ ಬಸದಿಯ ಕಲ್ಲು ಮೆಟ್ಟಿಲಲ್ಲಿ ಚೂರು ಚೂರೇ ಸರಿಯುವ ಸಂದೇಶ ಕಂಡ. ಕಣ್ಣೀರು ಈಗ ಧಾರಾಕಾರವಾಯ್ತು, ಎದೆಯ ತೊಟ್ಟಿಲಲ್ಲಿ ಜೀವವೂ, ನಿರ್ಜೀವವೂ ಒಂದಕ್ಕೊಂದು ಲಾಲಿ ಹಾಡಿ ತಣ್ಣಗೇ ತೂಗಿದಂತಾಗುವಾಗ ಎದುರಿನಿಂದ ಜೋರಾಗಿ ಬಂದ ಲಾರಿಯೊಂದಕ್ಕೆ ಸೀದಾ ಗುದ್ದಿದ ಬಸ್ಸು ಆನೆಕೆರೆಯ ಸ್ವಲ್ಪ ಆಚೆ ಇರುವ ಮರಕ್ಕೆ ಜೋರಾಗಿ ಬಡಿದು ಪ್ರಯಾಣಿಕರು ಚೀರಿಕೊಂಡರು. ಪಲ್ಲವಿಯ ಕೂಗು ಅವಳಿಗೇ ಕೇಳದಷ್ಟು ಮೌನವಾಗಿತ್ತು. ಅವಳ ಕೈಯಲ್ಲಿದ್ದ ಬಿಂದಿ ಪ್ಯಾಕೆಟು ಜಾರಿ ಹೋಗಿ ಕತ್ತಲಲ್ಲಿ ಆವಿಯಾಯಿತು. ಅಷ್ಟೊತ್ತಿಗೆ ಪಲ್ಲವಿ ಸಿಗದೇ ಆನೆಕೆರೆ ಬಸದಿಯಲ್ಲಿ ನಿರಾಶೆಯಿಂದ ಬಂದು ಕೂತಿದ್ದ ಸಂದೇಶನಿಗೆ ಬಸದಿಯಿಂದ ಬಲು ದೂರದಲ್ಲಿ ಹ್ಯಾಗ್ಯಾಗೋ ಮಿಂಚುತ್ತಿದ್ದ ಬಸ್‌ನ ದೀಪಗಳು ಕಾಣಿಸಿತಾದರೂ ಪಲ್ಲವಿಯದ್ದೇ ಧ್ಯಾನದಲ್ಲಿದ್ದ ಅವನಿಗೆ ಯಾಕೋ ಕತ್ತಲೆಯೇ ಆಪ್ತವಾದಂತಾಗಿ ಅಲ್ಲೇ ಬಸದಿಯ ಕತ್ತಲಲ್ಲಿ ಕೂತುಬಿಟ್ಟ. ■

# ಜೇನ್ನೊಣದ ಮ್ಯೂಸಿಯಂ

■ ಪ್ರಿಯಾಂಕ ವಿ.ಎಚ್.



ಹಲವಾರು ಬಗೆಯ ಮ್ಯೂಸಿಯಂಗಳ ಬಗ್ಗೆ ನಾವು ಕೇಳಿದ್ದೇವೆ. ಆದರೆ ಜೇನ್ನೊಣಗಳ ಮ್ಯೂಸಿಯಂ ಬಗ್ಗೆ ಬಹುತೇಕರು ಕೇಳಿರಲಾರರು. ಸ್ಪೇನ್ ದೇಶದ ಪೆಯೆಲ್ಲೇಸ್ ಡೆಲ್ ಹೊಯೊ ಎಂಬಲ್ಲಿ ವಿಶಿಷ್ಟವಾದ ಜೇನ್ನೊಣಗಳ ಮ್ಯೂಸಿಯಂ ಇದೆ. ಕಾರ್ಯನಿರತ ಜೇನ್ನೊಣಗಳ ಸುರಕ್ಷಿತ ವೀಕ್ಷಣೆಗೆ ಇದು ಅನನ್ಯ ಅವಕಾಶವನ್ನು ಒದಗಿಸುತ್ತದೆ. ಈ ಮ್ಯೂಸಿಯಂನಲ್ಲಿ ಗಾಜಿನಿಂದ ಮುಚ್ಚಿರುವ ಆರು ದೈತ್ಯಾಕಾರದ ಜೇನುಗೂಡುಗಳನ್ನು ಚಾವಣಿಯಿಂದ ನೇತುಬಿಡಲಾಗಿದ್ದು ಭೇಟಿ ನೀಡುವವರಿಗೆ ಜೇನ್ನೊಣಗಳು ಕಚ್ಚುವ ಕಿಂಚಿತ್ತೂ ಭಯ ಕಾಡುವುದಿಲ್ಲ.

ಮ್ಯೂಸಿಯಂನ ನಿರ್ದೇಶಕ ಹಾಗೂ ಸ್ವತಃ ಜೇನು ಕೃಷಿಕನಾಗಿದ್ದ ಗೆರಾರ್ಡೊ ಗೊನ್ಜಾಲೆಜ್ ಪೆರೆಜ್ ಅವರು 34 ವರ್ಷಗಳ ಹಿಂದೆ ವಿದ್ಯಾರ್ಥಿಯಾಗಿದ್ದಾಗಲೇ ಮೊದಲ ಗೂಡುಗಳನ್ನು ಸ್ಥಾಪಿಸಿದ್ದರು. ವರ್ಷಗಳು ಕಳೆದಂತೆ ಇವರ ಜೇನು ಸಾಕಾಣಿಕೆ ಪ್ರವೃತ್ತಿಯು ಅತ್ಯಂತ ಆಸಕ್ತಿದಾಯಕ ವೃತ್ತಿಯಾಗಿ ಪರಿಣಮಿಸಿತು. ಇದರ ಬಗ್ಗೆ ಸ್ಪಾನಿಶ್‌ನ ಹಲವಾರು ಪ್ರದೇಶಗಳಲ್ಲಿರುವ ಶಾಲಾ ಕಾಲೇಜುಗಳಲ್ಲಿ ಇವರು ಉಪನ್ಯಾಸವನ್ನು ನೀಡಿದ್ದಾರೆ ಮತ್ತು ಹವ್ಯಾಸಿಗಳಿಗೆ ಜೇನು ಸಾಕಾಣಿಕೆಯ ಶಿಕ್ಷಣವನ್ನು ನೀಡಿದ್ದಾರೆ.

ಸತತ 20 ವರ್ಷಗಳ ಕೆಲಸ ಹಾಗೂ ಸಂಶೋಧನೆಯ ನಂತರ ತಮ್ಮ ಜ್ಞಾನಾರ್ಜನೆಯನ್ನು ಹಂಚಲು ಮತ್ತು ಸಮಾಜದಲ್ಲಿ ಜೇನ್ನೊಣಗಳ ಬಗ್ಗೆ ಇರುವ ಗ್ರಹಿಕೆಯನ್ನು ಸುಧಾರಿಸಲು 1997 ರಲ್ಲಿ ಜೇನ್ನೊಣಗಳ ಮ್ಯೂಸಿಯಂ ಅನ್ನು ಸ್ಥಾಪಿಸಿದರು. ಇದು ಪ್ರಾರಂಭವಾದಾಗಿನಿಂದ ಹಲವಾರು ಜನರು ಇಲ್ಲಿಗೆ ಭೇಟಿ ನೀಡಿದ್ದಾರೆ. ಈ ಜೇನ್ನೊಣಗಳ ಮ್ಯೂಸಿಯಂ ಪರಾಗ ಸ್ಪರ್ಶ ಕ್ರಿಯೆ, ಜೇನ್ನೊಣಗಳ ಕಾರ್ಯನಿರ್ವಹಣೆ ಹಾಗೂ ಜೇನು ಸಾಕಲು ಬೇಕಾದ ಮೂಲಭೂತ ಅಂಶಗಳು ಮೊದಲಾದವುದರ ಕುರಿತು ಸಾಕಷ್ಟು ಮಾಹಿತಿಯನ್ನು ನೀಡಲು ಸಹಕಾರಿಯಾಗಿದೆ. ■